ನೀರಿನ ಸೌಲಭ್ಯವಿರಲಿಲ್ಲ. ಹಸುವನ್ನು ಗೋಮಾಳಕ್ಕೆ ಹಿಡಿದುಕೊಂಡು ಹೋಗುತ್ತಿದ್ದರು. ಅದು ಮಠ ಮತ್ತು ದರ್ಗಾಗಳ ಹತ್ತಿರವಿದ್ದು ಹತ್ತಾರು ಎಕರೆಯಷ್ಟು ವಿಸ್ತಾರವಾಗಿತ್ತು. ಮೊದಲೆಲ್ಲ ಅಲ್ಲಿ ಊರದನಗಳು ಮೇಯುವಷ್ಟು ಹುಲ್ಲು ಬೆಳೆದುಕೊಂಡಿರುತ್ತಿತ್ತು. ಆದರೆ, ಇತ್ತೀಚೆಗೆ ಮಠ ಮತ್ತು ದರ್ಗಾಗಳಿಗೆ ಭಕ್ತಾದಿಗಳು ಹೆಚ್ಚಾಗತೊಡಗಿದಂತೆ ಅಲ್ಲೆಲ್ಲ ಅನೇಕ ಅಂಗಡಿಗಳು, ಹೋಟೆಲುಗಳು ಪ್ರಾರಂಭವಾದವು. ಮಠ ಮತ್ತು ದರ್ಗಾಗಳ ನಡುವೆ ಕಾಂಪೌಂಡ್ ಎದ್ದು ನಿಂತಿತ್ತು. ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳಲು ಎಲ್ಲ ಅಂಗಡಿ ಹೋಟೆಲ್‌ಗಳವರು ಭಕ್ತಾದಿಗಳನ್ನು ಆಕರ್ಷಿಸತೊಡಗಿದರು. ಮೈಕುಗಳು ಭಕ್ತಿಗೀತೆಗಳನ್ನು ಮೊಳಗಿಸತೊಡಗಿದವು. ಎರಡೂ ಕಡೆಯವರು ಸರ್ಕಾರಿ ಜಮೀನನ್ನು ತಮ್ಮ ಜಾಗವೆಂದು ಒತ್ತರಿಸಿಕೊಂಡಿದ್ದರು. ಓಟಿನಾಸೆಗೆ ಜನಪ್ರತಿನಿಧಿಗಳು ಯಾವ ನಿಷ್ಠುರ ಕ್ರಮ ಕೈಗೊಳ್ಳದೆ ಸುಮ್ಮನಿದ್ದರು. ಭಯ, ಮೂಢನಂಬಿಕೆ, ದುರಾಸೆಗಳು ಅಧಿಕಾರಿವರ್ಗವನ್ನು ನಿರ್ವೀರ್ಯಗೊಳಿಸಿತ್ತು. ತಹಶೀಲ್ದಾರ್, ಎಸಿ, ಡಿಸಿಗಳು ಸಂಬಂಧವಿಲ್ಲದಂತೆ ತೆಪ್ಪಗಿದ್ದರು. ಮಠದವರು ದರ್ಗಾದವರ ವಿರುದ್ಧ ಹಾಗೂ ದರ್ಗಾದವರು ಮಠದವರ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಅವರು ತಮ್ಮ ಲಾರಿ, ಆಟೊಗಳಿಗೆ ಕೇಸರಿ ಬಾವುಟ ಹಾರಿಸಿಕೊಂಡು ಓಡಾಡಿದರೆ, ಇವರು ಹಸಿರು ಬಾವುಟ ಹಾರಿಸುತ್ತಿದ್ದರು. ಅವರು ಜುಟ್ಟು ಬಿಟ್ಟು ನಾಮ ಎಳೆದುಕೊಂಡು ಓಡಾಡಿದರೆ, ಇವರು ಗಡ್ಡ ಬಿಟ್ಟು ಟೋಪಿ ಹಾಕಿಕೊಂಡು ಓಡಾಡುತ್ತಿದ್ದರು. ಅದು ಹಾಗೇ ಮುಂದುವರಿದು ಚಿಕ್ಕಮಕ್ಕಳ ಮೂರುಗಾಲಿಯ ಸೈಕಲ್ಲಿಗೂ ಕೇಸರಿ ಇಲ್ಲವೇ ಹಸಿರು ಬಣ್ಣದ ಬಾವುಟಗಳು ಬಂದಿದ್ದವು. ಚಿಕ್ಕಮ್ಮ ಇಂಥವುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿದ್ದಳು. ದಿನವೂ ಭಕ್ತಾದಿಗಳ ನೂರಾರು ವಾಹನಗಳು ಗೋಮಾಳದಲ್ಲಿ ಬಂದು ನಿಲ್ಲುತ್ತಿದ್ದವು. ದನಗಳಿಗೆ ಎಲ್ಲೋ ಸಂದಿಮೂಲೆಯಲ್ಲಿ ಮೇಯಲು ಸ್ವಲ್ಪ ಜಾಗವಿತ್ತು. ಅಲ್ಲೆಲ್ಲ ಪ್ಲಾಸ್ಟಿಕ್ ಕವರುಗಳು, ಶೀಟುಗಳು, ಖಾಲಿ ಗುಟ್ಕಾ, ಅಡಿಕೆಪುಡಿ ಕವರುಗಳು, ತಿಂದೆಸೆದ ತಿಂಡಿಯ ಕವರುಗಳು, ಖಾಲಿ ಪ್ಲಾಸ್ಟಿಕ್ ಬಾಟಲುಗಳು ರಾಶಿ ರಾಶಿಯಾಗಿ ಬಿದ್ದಿರುತ್ತಿದ್ದವು. ಗಾಳಿ ಬೀಸಿತೆಂದರೆ ಈ ಪ್ಲಾಸ್ಟಿಕ್ ರದ್ದಿಯ ರಾಶಿ ಪರಪರ ಶಬ್ದ ಮಾಡುತ್ತ ಇಡೀ ಮೈದಾನವನ್ನು ಸುತ್ತು ಹೊಡೆಯುತ್ತಿತ್ತು. ಆಗಮಿಸಿದ ಭಕ್ತಾದಿಗಳು ಎಲ್ಲೆಂದರಲ್ಲಿ ಊಟ ಮಾಡಿ ಉಳಿಕೆ ಬಳಿಕೆಯನ್ನು ಎಸೆದು ಹೋಗಿರುತ್ತಿದ್ದರು. ಊರ ದನಕರುಗಳು ಹೂವು, ಹಣ್ಣು, ಅನ್ನ, ರೊಟ್ಟಿ, ಹುಗ್ಗಿ ಆಸೆಗೆ ಪ್ಲಾಸ್ಟಿಕ್ ಕವರುಗಳನ್ನು ತಿನ್ನುತ್ತಿದ್ದವು. ಬರುಬರುತ್ತ ಪ್ಲಾಸ್ಟಿಕ್ ಕವರುಗಳಲ್ಲಿ ತಿನ್ನಲೇನಾದರೂ ಇದ್ದೇ ಇರುತ್ತದೆ ಎಂದು ಬಗೆದು ಕವರುಗಳನ್ನು ಕಂಡಲ್ಲಿ ಮುಕ್ಕುತ್ತಿದ್ದವು. ಮಠದವರು ದರ್ಗಾದವರ ಮೇಲೆ ಹಾಗೂ ದರ್ಗಾದವರು ಮಠದವರ ಮೇಲೆ ಬೆಟ್ಟು ಮಾಡುತ್ತ ಇದ್ದುದರಿಂದ ಈ ಪ್ಲಾಸ್ಟಿಕ್ ರಾಶಿ ಹೆಚ್ಚುತ್ತಲೇ ಹೋಯಿತು.

ಹೀಗಿದ್ದಾಗ ಚಿಕ್ಕಮ್ಮನ ಹಸುವು ಶುರುವಿಗೆ ಹೊಟ್ಟೆಗೆ ತಿನ್ನುವುದು ಕಡಿಮೆ ಮಾಡಿತು. ಹಸು ಮೊದಲಿನ ಗೆಲುವು ತೋರದಂತಾಯಿತು. ನಿಯಮಿತವಾಗಿ ಮೆಲುಕು ಹಾಕುವುದು ತಪ್ಪಿತು. ಪರಿಣಾಮವಾಗಿ ಹಾಲಿನ ಇಳುವರಿ ಕಡಿಮೆಯಾಯಿತು. ಕೂಡಲೇ ಹಸುವನ್ನು ಆಸ್ಪತ್ರೆಗೆ ಹೊಡೆದುಕೊಂಡು ಹೋದರು. ಹಸು ಸ್ವಲ್ಪ ಮಂಕಾಗಿರುವುದನ್ನು ಬಿಟ್ಟರೆ ಬೇರೆ ಲಕ್ಷಣ ತೋರಲಿಲ್ಲ. ಜ್ವರ ಇರಲಿಲ್ಲ. ಹೊಟ್ಟೆ ಸ್ವಲ್ಪ ಬಿಗಿಯಾಗಿತ್ತು. ಡಾಕ್ಟ್ರು ಹಸಿವು ಹೆಚ್ಚಲು ಇಂಜೆಕ್ಷನ್ ಮಾಡಿ ಮಾತ್ರೆ ಮತ್ತು ಪುಡಿ ಔಷಧವನ್ನು ಕೊಟ್ಟರು. ಚಿಕ್ಕಮ್ಮ ಮೂರ್ನಾಲ್ಕು ದಿನ ಹೊಟ್ಟೆಗೆ ಪುಡಿಗಳನ್ನು ಬೆಲ್ಲದ ಜೊತೆಗೆ ಮಿದ್ದು ತಿನ್ನಿಸಿದಳು. ಹಸು ಸ್ವಲ್ಪವೇ ಸ್ವಲ್ಪ ಹುಷಾರಾಯಿತೆನಿಸಿತು ಚಿಕ್ಕಮ್ಮನಿಗೆ. ಆದರೆ, ಹಸು ಮೊದಲು ತಿಂದಷ್ಟು ಆಹಾರವನ್ನು ತಿನ್ನದಾಯಿತು. ದಿನಕಳೆದಂತೆ ಕರೆಯುವ ಹಾಲಿನ ಪ್ರಮಾಣ ಇಳಿಯುತ್ತಲೇ ಹೋಯಿತು. ಚಿಕ್ಕಮ್ಮನ ಮನೆಮಂದಿಗೆಲ್ಲ ಆರೋಗ್ಯ ತಪ್ಪಿದಂತಾಯಿತು. ಎಲ್ಲರೂ ಮುಖ ಇಳಿಬಿಟ್ಟುಕೊಂಡು ಹಸುವಿನ ಮುಂದೆ ಜಪ ಮಾಡುವಂತೆ ಕುಳಿತುಕೊಳ್ಳುತ್ತಿದ್ದರು. ಒಂದು